ಅತಿಸಾಮಾನ್ಯ ಸನ್ನಿವೇಶವನ್ನು (ನಾನ್-ಇಶ್ಯೂ) ಎತ್ತಿಕೊಂಡು ಅದರೊಳಗಿಂದ ವಿಶೇಷಾರ್ಥದ ಅನ್ವೇಷಣೆ – 'ಒಂದು ಕಲ್ಲಂಗಡಿ ಹಣ್ಣನ್ನು ಕತ್ತರಿಸುವುದು'. ಹೀಗೆ ಹಲವು ಬಗೆಯ ರಚನಾ ವಿಧಾನಗಳನ್ನು ಅವರು ಶೋಧಿಸುತ್ತ ಹೋಗುತ್ತಾರೆ ಮತ್ತು ತನ್ಮೂಲಕ ಕವಿತೆಯ ಅಸ್ತಿತ್ವದ ಕಡೆಗೆ, ಅಥವಾ ಕವಿತೆಯೊಂದು 'ಆಗುವ' ಪ್ರಕ್ರಿಯೆಯ ಕಡೆಗೆ ನಮ್ಮ ಗಮನ ಸೆಳೆಯುತ್ತಾರೆ. 'ಪಾಪಿಯೂ' ಸಂಕಲನದಲ್ಲಿ ಕಾಣುವಂತೆ ಕಥನಕಾವ್ಯದಲ್ಲಿಯೂ ವಿಭಿನ್ನ ಸಂಸ್ಕೃತಿಗಳಿಂದ ಎತ್ತಿಕೊಂಡ ವಸ್ತು-ವಿಷಯವನ್ನು ಅತ್ಯಂತ ಸರಳ ಓದಿಗೆ ಒಗ್ಗುವ ಹಗುರ ಶೈಲಿಯಲ್ಲಿ ಪ್ರಸ್ತುತಪಡಿಸುವುದು ತಿರುಮಲೇಶ್ ಅವರ ರೀತಿ. ಅಷ್ಟೇ ಅಲ್ಲ, ತಾವು ಬಳಸುವ ಕನ್ನಡದ ಪ್ರತಿ ಪದದ ನಾದ, ಅರ್ಥ, ಲಯಗಳೆಲ್ಲವನ್ನು ವಿಸ್ತಾರವಾಗಿ ವಿಷದಪಡಿಸುವ ಪ್ರಯತ್ನವನ್ನು ಸಹ ಅವರು ಮಾಡುತ್ತಾರೆ. ಹಾಗಾಗಿಯೇ, ಗಿಡ್ಡ ಸಾಲುಗಳು, ಪುನರುಕ್ತಿ, ಪದನಾದಗಳನ್ನು ಎತ್ತಿ ತೋರುವುದು, ನಾನಾರ್ಥ, ನಿಕಟಅರ್ಥ, ನಿಕಟಧ್ವನಿಯ ಶಬ್ದಗಳ ಬಳಕೆ ಹೀಗೆ ಅನೇಕಾನೇಕ ಪ್ರಯೋಗಗಳನ್ನು ಅವರ ಕವನಗಳಲ್ಲಿ ಕಾಣಬಹುದು. ಉದಾಹರಣೆಗೆ:

ಎಂದರು – ಹತ್ತಿರ  
ಹತ್ತಿರ ಬಂದರು, ಹತ್ತೂ ಮಂದಿ  
ಸುತ್ತ ಮುತ್ತ ಯಾರಿಲ್ಲ  
ಬಿಟ್ಟರೆ ಬೀದಿಯ ಮಂದಿ  
ಖಲೀಫ ಹಕೀಮರ ಹೊಗಳೆ  
ಮನೆ ಮನೆ ಬಾಗಿಲ ಅಗಳೆ  
('ದೇವರು ದೊಡ್ಡವ' – ಪಾಪಿಯೂ, 1990)

ತಿರುಮಲೇಶ್ ಅವರ ಕಾವ್ಯಭಾಷೆ ಮತ್ತು ಧ್ವನಿ ಅವರದ್ದೇ ಆಗಿದೆ. ಕನ್ನಡದ ಅಗ್ರಸಾಲಿನ ಕವಿಗಳಲ್ಲಿ ತಮ್ಮ ಕಾವ್ಯಶಕ್ತಿಯನ್ನು ರೂಪಿಸಿಕೊಳ್ಳುವಲ್ಲಿ ಕನ್ನಡ ಪರಂಪರೆಯಿಂದ ಕನಿಷ್ಠ ಆಮದು ಮಾಡಿಕೊಂಡವರು ತಿರುಮಲೇಶ್ ಅವರೇ ಇರಬೇಕು. ಅವರ ಕಾವ್ಯದಲ್ಲಿ ದಾಸ ಸಾಹಿತ್ಯದ ಪ್ರಭಾವ ಇದೆ, ತತ್ವಪದಗಳ (ವಿಶೇಷವಾಗಿ ಶರೀಫ್) ಪ್ರಭಾವ ಇದೆ. ಆದರೆ, ಈ ರಚನೆಗಳನ್ನು ತಿರುಮಲೇಶ್ ಪ್ರತ್ಯೇಕ ಪ್ರಯೋಗವಾಗಿಯೇ ಮಾಡುತ್ತಾರೆ – ತಮ್ಮ ಯಾವತ್ತೂ ಕವನಗಳಲ್ಲಿ ಈ ಪರಂಪರೆಗಳ ಅಂಶಗಳನ್ನು ಹಾಸುಹೊಕ್ಕಾಗಿಸಿಕೊಂಡಿಲ್ಲ. 'ಮಹಾಪ್ರಸ್ಥಾನ'ದಂತಹ ಮುಂಚಿನ ಕವನಗಳಲ್ಲಿ ಅಡಿಗರ ನೆರಳು ನಮಗೆ ತೋರುತ್ತದೆ. ಮುಂದೆ ತಿರುಮಲೇಶ್ ತಮ್ಮದೇ ಕಾವ್ಯದಾರಿ- ವಿಶಿಷ್ಟವಾದ ರಚನಾಕ್ರಮ ಮಾತ್ರವಲ್ಲದೇ, ವಸ್ತುವಿಷಯದ ಪ್ರಸ್ತುತಿ ಮತ್ತು ಧ್ವನಿ- ಪರಿಷ್ಕರಿಸಿಕೊಂಡರು. ಇದು ಸ್ಪಷ್ಟವಾಗಿ ಮೊದಲು ಗೋಚರಿಸುವುದು 'ಮುಖಾಮುಖಿ' ಮತ್ತು 'ಅವಧ' ಸಂಕಲನಗಳ ಕವನಗಳಲ್ಲಿ. ನವ್ಯ ಕಾವ್ಯದ ಲವಲೇಶವನ್ನೂ ಉಳಿಸಿಕೊಂಡಿರದ ಈ ಕವನಗಳು ಯುವ ಓದುಗರಲ್ಲಿ ಸಂಚಲನ ಹುಟ್ಟಿಸಿದ್ದು ಸತ್ಯ.

'ಅವಧ' ಪ್ರಕಟವಾಗಿದ್ದು 1986ರಲ್ಲಿ. ಅದು ಕನ್ನಡದ ಅನೇಕ ಕವಿಗಳು ನವ್ಯೋತ್ತರ ಕಾವ್ಯ ವಿಧಾನಗಳ ಶೋಧನೆಯಲ್ಲಿದ್ದ ಕಾಲ. ತಿರುಮಲೇಶ್ ಅವರಂತೆಯೇ, ಎಚ್.ಎಸ್. ಶಿವಪ್ರಕಾಶ್, ಎಸ್. ಮಂಜುನಾಥ್, ಜಯಂತ ಕಾಯ್ಕಿಣಿ, ವೈದೇಹಿ ಇವರೆಲ್ಲರೂ ನವ್ಯೋತ್ತರದ ಕನ್ನಡ ಕಾವ್ಯವನ್ನು ರೂಪಿಸುತ್ತಿದ್ದ ಕಾಲ. ಆದರೆ, ತಿರುಮಲೇಶ್ 'ಅವಧ' ಶೈಲಿಯನ್ನು ತಮ್ಮ ಬ್ರ್ಯಾಂಡ್ ಮಾಡಿಕೊಳ್ಳುತ್ತ ಮುಂದುವರಿಯುವ ಬದಲು, ಶೋಧನೆ ಮುಂದುವರಿಸುತ್ತ ಹೋದರು. 'ಪಾಪಿಯೂ' ಸಂಕಲನ 1990ರಲ್ಲಿ ಪ್ರಕಟವಾಯಿತು. ಅಷ್ಟರಲ್ಲಿ ಭಾರತ-ಭಾರತೇತರ ಇತಿಹಾಸ-ಪುರಾಣಗಳಿಂದ ಪಾತ್ರ-ವಸ್ತುಗಳನ್ನು ಬಳಸಿ ಕಾವ್ಯರಚಿಸುವ ಮೂಲಕ ಸಮಕಾಲೀನ ಸಂದರ್ಭವನ್ನು ಪರೀಕ್ಷಿಸುವ ಒಂದು ಕಾವ್ಯವಿಧಾನವನ್ನು ಶಿವಪ್ರಕಾಶ್ ತಮ್ಮ ಮೊದಲ ಸಂಕಲನದಿಂದಲೇ ಪರಿಚಯಿಸಿದ್ದರು. ತಿರುಮಲೇಶ್ ಈ ವಿಧಾನದ ಕವಿತೆಗೆ ಕೈ ಹಾಕಿದ್ದರೂ ಸಹ ಸಾತತ್ಯದಿಂದಲ್ಲ; ಇಗೋ ನೋಡಿ, ನಾನೂ ಇದನ್ನು ಮಾಡಬಲ್ಲೆ ಎಂದಿತು ಅವರ 'ಪಾಪಿಯೂ'. ವಿವಿಧ ದೇಶಕಾಲದ ಪಾತ್ರ-ವಸ್ತುಗಳನ್ನು ಹೊಂದಿರುವ ಅತ್ತ ಪೂರ್ಣ ಕಥನಕಾವ್ಯವೂ ಅಲ್ಲದ, ಇತ್ತ ಸ್ಪಷ್ಟ ಲಿರಿಕ್ ಕವನಗಳೂ ಅಲ್ಲದ ಹದಿನೇಳು ವಿಶಿಷ್ಟ ರಚನೆಗಳು ಇದರಲ್ಲಿವೆ. ತಮ್ಮ ವಿಶಾಲ ಓದಿಗೆ ಪ್ರಸಿದ್ಧರಾಗಿರುವ ತಿರುಮಲೇಶ್ 'ಪಾಪಿಯೂ' ಸಂಕಲನದಿಂದ ತಮ್ಮ ವಿದ್ವತ್ತನ್ನು ಓದುಗರಿಗೆ ತಲುಪಿಸುವ ಮಾಧ್ಯಮವಾಗಿಸಿ,